3. Government have since taken a decision to approve the allotment of balance sites numbering 99 sites to the Legislators as proposed by the Bangalore Development Authority to be equally divided amongst the Members of the two associations of Legislators subject to the fallowing condit ons:—

1. The allotment should be as per the conditions prescribed in the Bangalore Development Authority (allotment of sites) Rules.
2. Instead of stray sites, bulk allotment at one place is to be given to eligible Members who do not own sites or houses.
3. Site should not be alloted to such Members who had earlier been alloted site or house by the erstwhile C.I.T.B. or Bangalore Development Authority.

ಶ್ರೀ ಕೆ.ಹೆಚ್. ಪಾಟೀಲ್.—ಸ್ವಾಮಿ, ಅದರಲ್ಲಿ ಕೆಲವರಿಗೆ ಇನ್ನೂ ಸೈಟ್ ಸಿಕ್ಕಿಲ್ಲ, ಬೇಗನೆ ಮಾಡಿಸಿ ಕೊಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾಡಿಸಿಕೊಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಆಜೆಂಡಾದಲ್ಲಿ ಇರುವ ಎರಡನೇ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗೃಹಮಂತ್ರಿಗಳು ಉತ್ತರ ಕೊಡಬೇಕಾಗಿರುವುದರಿಂದ, ಮತ್ತು ಅವರು ಈಗ ವಿಧಾನ ಪರಿಷತ್ತಿನಲ್ಲಿ ರುವುದರಿಂದ ಆಮೇಲೆ ತೆಗೆದುಕೊಳ್ಳೋಣ.

ಅಧ್ಯಕ್ಷರು.—ಮಾನ್ಯ ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್‌ರವರ ಗಮನ ಸೆಳೆಯುವ ಸೂಚನೆಯು ವಿಷಯದ ಬಗ್ಗೆಯೂ ಮಧ್ಯಾಹ್ನ ೩ ಗಂಟೆಗೆ ಚರ್ಚೆಗೆ ಬರುತ್ತದೆ.

ಶ್ರೀ ಆರ್.ಎನ್. ನಾಯಕ್.—ಸ್ವಾಮಿ ನಾವು ಕೊಟ್ಟ ನೋಟೀಸ್ ಬಗ್ಗೆ ಏನಾಯಿತು ?

ಅಧ್ಯಕ್ಷರು.—ಅದನ್ನು ಸೋಮವಾರ ತೆಗೆದುಕೊಳ್ಳೋಣ.

೩೩ನೇ ನಿಯಮದ ಮೇರೆಗೆ

೧. ದಿನಾಂಕ ೩೧-೧-೮೭ರಂದು ವಿಧಿಸಿದ ಜಿಲ್ಲಾಪರಿಷತ್ ಮತ್ತು ಮಂಡಲಿ ಸದಸ್ಯರ ಸಭೆಯ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ದಿನಾಂಕ ೩೧-೧-೮೭ರಂದು ಕರ್ನಾಟಕಾದ್ಯಂತ ಜಯಗಳಿಸಿರುವ ವಿಜೇತ ಮಂಡಲಿ ಸದಸ್ಯರು ೫೬,೦೦೦ ಮಂದಿ ಮತ್ತು ಜಿಲ್ಲಾ ಪರಿಷತ್ ಸದಸ್ಯರ, ವಿಧಾನ ಸಭಾ, ವಿಧಾನ ಪರಿಷತ್ ಸದಸ್ಯರ ಸಭೆ ಅಥವಾ ಸಮಾವೇಷ ಏರ್ಪಾಡಿಸಲಾಗಿದೆ ೧೨೦೦ ವಾಹನಗಳಲ್ಲಿ ಬೆಂಗಳೂರಿಗೆ ಬರಲಿರುವ ಸದಸ್ಯರ ಸಮಾವೇಶಕ್ಕೆ ಒಂದು ಕೋಟಿ ರೂಪಾಯಿಗೂ ಮೇಲ್ಪಟ್ಟು ಖರ್ಚಾಗುವ ಸಂಭವವಿದೆಯಾದರೂ, ಈಗಲೂ ಈ ಸಮಾವೇಶದ ಬಗ್ಗೆ ಅದರ ಔಚಿತ್ಯದ ಬಗ್ಗೆ ವಿಜೇತ ಸದಸ್ಯರಿಗಾಗಲೀ ಸಾರ್ವಜನಿಕರಿಗಾಗಲಿ ಇಲ್ಲವೇ ಈ ಸದನದ ಸದಸ್ಯರಿಗಾಗಲಿ ಸ್ಪಷ್ಟ ನಿರೂಪಣೆ ಇಲ್ಲದೆ, ಈ ಬೃಹತ್ ಸಮಾವೇಶದ ಏರ್ಪಾಡು ಇದರ ಅವಶ್ಯಕತೆಯ ಬಗ್ಗೆ ವಿವರಣೆ ಅತ್ಯಾವಶ್ಯಕವಾಗಿ ಕರ್ನಾಟಕ ಜನತೆಗೆ, ಜನಸಾಮಾನ್ಯನಿಗೆ ಅದರಲ್ಲೂ ಮುಖ್ಯವಾಗಿ ಜಿಲ್ಲಾ ಪರಿಷತ್-ಮಂಡಲ್ ಪಂಚಾಯ್ತಿಯ ಸದಸ್ಯರಿಗೆ ತಿಳಿಯುವುದು ಮತ್ತು ವಿವರಣೆ ಪಡೆಯುವುದು ಅತ್ಯಾವಶ್ಯಕವಾದುದರಿಂದ ಈ ಪ್ರಸ್ತಾವನೆಯನ್ನು ಸದನದ ಗಮನಕ್ಕೆ ತರಲು ಇಚ್ಛಿಸಿ ಇದು ಸಾರ್ವಜನಿಕ ಮಹತ್ವದ ವಿಷಯವಾದುದರಿಂದ ಸದನದಲ್ಲಿ ತಿಳಿಸಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಅಥವಾ ಗ್ರಾಮಾಭಿವೃದ್ಧಿ ಮಂತ್ರಿಗಳಿಂದ ವಿವರಣೆಯನ್ನು ಕೇಳಲಿಚ್ಛಿಸಿ ಈ ಸೂಚನೆಯನ್ನು ಇಲ್ಲಿ ಮಂಡಿಸಲು ತಮ್ಮ ಅನುಮತಿ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳುತ್ತೇನೆ.

೨. ರಾಜ್ಯದಲ್ಲಿ ಹತ್ತಿ ಬೆಳೆಗಾರರಿಗೆ ತೊಂದರೆಯಾಗಿರುವುದು

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಹತ್ತಿ ಬೀಜ ಬೆಳೆಗಾರರು ತಾವು ಬೆಳೆದ ಹತ್ತಿಯನ್ನು ಜಿನ್ನಿಂಗ್ ಮಾಡಿಸಲು ದೂರದ ಸ್ಥಳಗಳಿಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಯಾವ ಗ್ರಾಮದಲ್ಲಿ ಹತ್ತಿ ಬೆಳೆಯ ಪ್ಲಾಟುಗಳು ಹೆಚ್ಚಾಗಿವೆಯೋ ಆ ಗ್ರಾಮದಲ್ಲಿ ಜಿನ್ನಿಂಗ್ ಸೌಲಭ್ಯವಿದ್ದರೂ ಕೂಡ ಬೇರೆ ಗ್ರಾಮಕ್ಕೆ ಹೋಗಿ ಜಿನ್ನಿಂಗ್ ಮಾಡಿಸಲು ಕರ್ನಾಟಕ ರಾಜ್ಯ ಬೀಜ ನಿಗಮದ ಅಧಿಕಾರಿಗಳು ಆದೇಶ ನೀಡಿದ್ದಾರೆ. ಇದೊಂದು ಅವ್ಯವಹಾರಿಕ ಅಧಿಕಾರಶಾಹಿ ಕ್ರಮವಾಗಿದೆ.

ಉದಾ.—ನರಗುಂದ ತಾಲ್ಲೂಕ್ ಬೀಜ ಬೆಳೆಗಾರರಿಗೆ ಕೇಂದ್ರವನ್ನು ಹುಬ್ಬಳ್ಳಿಗೆ ಕೊಡಲಾಗಿದೆ.

ಜಿನ್ನಿಂಗ್ ಮಾಡಿಸಲು ರೈತರಿಗೆ ಇರುವ ತೊಂದರೆಗಳನ್ನು ವಿವರಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಕೂಡಲೇ ತಿಳಿದಿದ್ದರೂ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಜಿನ್ನಿಂಗ್ ಕೇಂದ್ರಗಳಿಗೆ ಅನುಮತಿ ನೀಡಲಾಗಿದೆ.

ಜಿನ್ನಿಂಗ್ ಸಲುವಾಗಿ ಇನ್ನೊಂದು ಊರಿಗೆ ಬಲಸೆ ಹೋಗುವ ಪರಿಸ್ಥಿತಿಯನ್ನು ಉಂಟು ಮಾಡಿರುವುದರಿಂದ ಕೃಷಿ ಕಾರ್ಮಿಕರನ್ನು ಪಡೆಯುವಲ್ಲಿ ಕೂಡ ತೊಂದರೆಯಾಗಿದೆ.

ಇಷ್ಟಿದ್ದರೂ ಕೂಡಾ ಆರ್ಥಿಕ ಪಾಪಿ ಆಗುವುದೆನ್ನುವ ಚಿಂತೆಯಿಂದ ರೈತರು ಸುಧಾರಿಸಿಕೊಂಡು ನಡೆದಿರುವುದು ಎಲ್ಲವೂ ಸರಿಯಾಗಿ ನಡೆದಿದೆ ಎಂದು ತಿಳಿದುಕೊಂಡರೆ ಅಧಿಕಾರಿಗಳದೇ ತಪ್ಪು ಅಭಿಪ್ರಾಯವಾಗುತ್ತದೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—ಹತ್ತಿ ಬೀಜ ಉತ್ಪಾದನೆಯನ್ನು ಕರ್ನಾಟಕ ರಾಜ್ಯ ಬೀಜ ನಿಗಮವು ರೈತರ ಮೂಲಕ ತೆಗೆದುಕೊಳ್ಳುತ್ತಿದೆ. ೧೯೮೬-೮೭ರ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ರಾಜ್ಯದ ೧೩ ಜಿಲ್ಲೆಗಳಲ್ಲಿ ತೆಗೆದುಕೊಳ್ಳಲಾಗಿದೆ. ಹತ್ತಿ ಬೀಜೋತ್ಪಾದನೆಯಲ್ಲಿ ವೈವಿಧ್ಯತೆಯಿಂದ ಕೊನೆಯ ಹಂತದವರೆಗೂ ಬಹಳ ಜಾಗರೂಕತೆ ವಹಿಸಬೇಕಾಗಿರುತ್ತದೆ. ಈ ಕಾರಣದಿಂದ ಹತ್ತಿ ಅರೆದು ಸ್ವಚ್ಛ ಮಾಡಿದ ಬೀಜದ ಮಾದರಿಯನ್ನು ತೆಗೆಯುವಾಗ ಕರ್ನಾಟಕ ರಾಜ್ಯ ಬೀಜ ನಿಗಮ ಮತ್ತು ಕರ್ನಾಟಕ ರಾಜ್ಯ ಬೀಜ ಪ್ರಮಾಣ ಸಂಸ್ಥೆಯ ಪ್ರತಿನಿಧಿಗಳು ಉಪಸ್ಥಿತರಾಗಿರಬೇಕಾಗಿರುತ್ತದೆ. ಈ ಸಂಸ್ಥೆಗಳಲ್ಲಿ ದೊರೆಯುವ ಸಿಬ್ಬಂದಿ ಮತ್ತು ಹತ್ತಿ ಬೀಜೋತ್ಪಾದನಾ ಕ್ಷೇತ್ರವನ್ನು ಪರಿಗಣನೆಗೆ ತೆಗೆದುಕೊಂಡು ಯಾವ ಯಾವ ಕೇಂದ್ರಗಳಲ್ಲಿ ಹತ್ತಿಯನ್ನು ಅರಿಯಬೇಕೆಂದು ನಿರ್ಧರಿಸಲಾಗುತ್ತದೆ.

ಕಳೆದ ವರ್ಷದ ಅನುಭವ, ಈ ವರ್ಷದ ವಿಸ್ತೀರ್ಣ ಮತ್ತು ಸಿಬ್ಬಂದಿಯ ದೊರೆಯುವಿಕೆಯನ್ನು ಗಣನೆಗೆ ತೆಗೆದುಕೊಂಡು ರೋಣ ತಾಲ್ಲೂಕಿನಲ್ಲಿ ಮೂರು ಕಡೆ ಜಿನ್ನಿಂಗ್ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಇದೇ ರೀತಿ ಉಳಿದ ತಾಲ್ಲೂಕ್‌ಗಳಲ್ಲಿಯೂ ಸಹ ಮೇಲೆ ತಿಳಿಸಿದ ವಿಷಯಗಳನ್ನು ಗಣನೆಗೆ ತೆಗೆದುಕೊಂಡು ಹತ್ತಿ ಅರೆಯುವ ಸ್ಥಳಗಳನ್ನು ಗುರುತಿಸಿ ಆಯ್ಕೆ ಮಾಡಲಾಗಿದೆ. ಮತ್ತು ಮತ್ತು ನರಗುಂದ ನವಲಗುಂದ ಮತ್ತು ಧಾರವಾಡ ತಾಲ್ಲೂಕ್‌ಗಳಲ್ಲಿ ಇರತಕ್ಕಂಥ ಬೆಳೆಗಾರರನ್ನು ಗಣನೆಗೆ ತೆಗೆದುಕೊಂಡು ಹತ್ತಿಯನ್ನು ಒಂದೇ ಸ್ಥಳವಾದ ಹುಬ್ಬಳ್ಳಿಯಲ್ಲಿ ದೊರೆಯುವುದರಿಂದ ಹುಬ್ಬಳ್ಳಿ ಕೇಂದ್ರವನ್ನು ನೇಮಕ ಮಾಡಲಾಗಿದೆ. ಈ ತರಹ ಮಾಡದೇ ಹೋಗಿದ್ದರೆ, ರೈತರು ಮೇಲಿನ ಕಾರ್ಯಕ್ರಮಗಳಿಗೆ ಒದ್ದಕ್ಕಿಂತ ಹೆಚ್ಚಿನ ಕೇಂದ್ರಗಳಿಗೆ ಬೀಜವನ್ನು ಸಾಗಿಸಬೇಕಾದ ಪ್ರಸಂಗಗಳು ಬರುತ್ತವೆ.

ಈ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟರೆ ಅದನ್ನು ಮುಂದಿನ ಸಲ ಕಾರ್ಯರೂಪಕ್ಕೆ ತರುತ್ತೇವೆ.